# ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ

## ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಕಾನೂನು ಶಾಲೆ

(ನ್ಯಾಕ್‌ನಿಂದ 'ಎ' ಗ್ರೇಡ್ ಮಾನ್ಯತೆ)

ನವನಗರ, ಹುಬ್ಬಳ್ಳಿ - 580025

## ರಾಜ್ಯ ಮಟ್ಟದ ಎಂಟನೆಯ ಕನ್ನಡ ಕಲ್ಪಿತ ನ್ಯಾಯಾಲಯ ಸ್ಪರ್ಧೆ

ದಿನಾಂಕ: 10ನೇ ಮತ್ತು 11ನೇ ಜುಲೈ 2021

## ತಮಗೆಲ್ಲರಿಗೂ ಆತ್ಮೀಯ ಸ್ವಾಗತ



**ಪ್ರೊ. ಪಿ. ಈಶ್ವರ ಭಟ್**
ಉಪಕುಲಪತಿಗಳು, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ಹುಬ್ಬಳ್ಳಿ



**ಪ್ರೊ. ಜಿ. ಬಿ. ಪಾಟೀಲ**
ಕುಲಸಚಿವರು (ಮೌಲ್ಯಮಾಪನ), ಕರಾಕಾವಿ



**ಪ್ರೊ. ರತ್ನಾ ಭರಮಗೌಡರ್**
ಡೀನ್, ಕರಾಕಾವಿ



**ಮೊಹಮ್ಮದ ಝುಬೇರ ಎನ್.** ಕೆ.ಎ.ಎಸ್.
ಕುಲಸಚಿವರು, ಕರಾಕಾವಿ



# ಅಣಕು ನ್ಯಾಯಾಲಯ ಸ್ಪರ್ಧೆಯ ಸಮಸ್ಯೆ

## ಗೌರವಾನ್ವಿತ ಭಾರತದ ಸರ್ವೋಚ್ಚ ನ್ಯಾಯಾಲಯ, ನವದೆಹಲಿ

## ಇವರ ಸಮ್ಮುಖದಲ್ಲಿ

## ರಿಟ್ ಅರ್ಜಿ ಸಂಖ್ಯೆ : 583/2020

1. **ನಿರುದ್ಯೋಗ ನಿವಾರಣ್ ಕಾನೂನು ಮಂಚ್ (ರಿ.) ನವಖಾಲಿ, ಪಶ್ಚಿಮ ಬಂಗಾಳ**

2. **ದೇಶ ಉಳಿಸಿ ರಾಷ್ಟ್ರೀಯ ಸ್ವಾಭಿಮಾನ್ ಆಂದೋಲನ, ಸೇವಾಗ್ರಾಮ, ವರ್ಧಾ ಹಾಗೂ ಇತರರು.**

**ವಿರುದ್ಧ**

1. **ಭಾರತದ ಒಕ್ಕೂಟ, ನವದೆಹಲಿ ಹಾಗೂ ಇತರರು.**

ಭಾರತ ಒಕ್ಕೂಟವು ಏಳು ದಶಕಗಳ ಸ್ವಾತಂತ್ರ್ಯಾ ನಂತರವು ಮೂಲಭೂತ ಆಂತರಿಕ ಸಮಸ್ಯೆಗಳಾದ ಬಡತನ, ನಿರುದ್ಯೋಗ, ಭ್ರಷ್ಟಾಚಾರ, ಮತಾಂಧತೆ, ಪ್ರಾದೇಶಿಕತೆ ಮುಂತಾದವುಗಳಿಂದ ಮುಕ್ತವಾಗಿಲ್ಲ. ಈ ನಿಟ್ಟಿನಲ್ಲಿ ಸಮಸ್ಯೆಗಳ ಪರಿಹಾರಕ್ಕೆ ಆಡಳಿತದಿಂದ ತೋರಿಕೆಯ ಪ್ರಯತ್ನಗಳಾದವೇ ಹೊರತು, ನೈಜ ಕ್ರಮಗಳಾಗಲಿಲ್ಲ. ಬದಲಾಗಿ ಈ ಸಮಸ್ಯೆಗಳನ್ನು ಉಲ್ಬಣಗೊಳಿಸುವ ದಿಶೆಯಲ್ಲಿ ಬಹುತೇಕ ರಾಜಕೀಯ ಪಕ್ಷಗಳು ಸ್ವ-ಲಾಭಕ್ಕಾಗಿ ಪ್ರಜಾಪ್ರಭುತ್ವ, ಕಲ್ಯಾಣ ರಾಜ್ಯದ ಹೆಸರಿನಲ್ಲಿ ಹಲವು ಯೋಜನೆಗಳನ್ನು ಜಾರಿಗೊಳಿಸಿದರೂ ಸಾಧನೆ ಮಾತ್ರ ಶೂನ್ಯ, ಇಲ್ಲವೇ ಹಿಮ್ಮುಖ ನಡಿಗೆಯಾಗಿದೆ.

ನಿರುದ್ಯೋಗವೆಂಬುದು ಭಾರತವನ್ನಷ್ಟೇ ಬಾಧಿಸುವ ವ್ಯಾಧಿಯಲ್ಲ. ಬದಲಾಗಿ ಅಮೇರಿಕ ವನ್ನೊಳಗೊಂಡಂತೆ ವಿಶ್ವವ್ಯಾಪ್ತಿ ಪಿಡುಗಾಗಿದೆ. ಮಾನವ ಉದ್ಯೋಗ ಸೃಜಿಸುವ ಯೊಜನೆಗಳನ್ನು ಬದಿಗೊತ್ತಿ, ಅವುಗಳನ್ನು ಕಿತ್ತುಕೊಳ್ಳುವ ಯೋಜನೆಗಳಿಗೆ ನಮ್ಮ ಆಡಳಿತಗಾರರು ಮಣೆ ಹಾಕಿದ ಪರಿಣಾಮ ಇಂದು ಎಲ್ಲ ಕ್ಷೇತ್ರಗಳಲ್ಲೂ ಯಂತ್ರಗಳು ಪ್ರಾಮುಖ್ಯತೆ ಪಡೆದು, ನಿರುದ್ಯೋಗ ರಾರಾಜಿಸುವಂತಾಗಿದೆ.

ಕಳೆದ ಕೆಲದಶಕಗಳಲ್ಲಿ ಇಂತಹ ಸಮಸ್ಯೆಗಳಿಂದ ಬೇಸತ್ತ ಯುವಕರು ತೀವ್ರತರವಾದ ಪ್ರತಿಭಟನೆ, ಚಳುವಳಿ ಮಾಡಿ ತಮ್ಮ ಪ್ರತಿಕಾರ ದಾಖಲಿಸುತ್ತಿದ್ದರು. ಆದರೆ ಇತ್ತೀಚೆಗೆ ನಮ್ಮ ಯುವಕರು ಸಮಸ್ಯೆಗೆ ಕಾರಣಗಳೇನು? ಪರಿಹಾರಕ್ಕೆ ಉಪಾಯಗಳೇನು ಎಂಬ ತಾತ್ವಿಕತೆಯೊಟ್ಟಿಗೆ ಪ್ರತಿಭಟಿಸುವದು ಒತ್ತಟ್ಟಿಗಿರಲಿ, ತಾವೇನಾಗಬೇಕಿದೆ? ತಮಗೇನಾಗಬೇಕಿದೆ? ಎಂದೂ ಕೂಡ ಚಿಂತಿಸದೇ, ಹಗಲು-ರಾತ್ರಿ ಮೊಬೈಲ್, ಸಾಮಾಜಿಕ ಜಾಲತಾಣಗಳಲ್ಲಿ ಮಗ್ನರಾಗಿರುವುದು ರೋಮನ್ ದೊರೆ ನೀರೊನನ್ನು ನೆನೆಪಿಸುವಂತಿದೆ.

* **ಈ ಅಣಕು ನ್ಯಾಯಾಲಯದ ಸಮಸ್ಯೆಯು ಶ್ರೀ ಬಸವಪ್ರಭು ಹೊಸಕೇರಿ, ಹಿರಿಯ ನ್ಯಾಯವಾದಿ, ಧಾರವಾಡ ಇವರಿಂದ ರಚಿಸಲ್ಪಟ್ಟಿದ್ದು, ಇದು ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಸ್ವತ್ತಾಗಿರುತ್ತದೆ.**

ಅರ್ಜಿದಾರ ಸಂಸ್ಥೆಗಳು, ಭಾರತದ ಸಂದರ್ಭದಲ್ಲಿ ನಿರುದ್ಯೋಗ ನಿವಾರಣೆಗೆ ಕೈಗೊಳ್ಳಬೇಕಾದ ವೈಜ್ಞಾನಿಕ ಕ್ರಮಗಳೇನಾಗಿರಬೇಕು ಎಂಬುದನ್ನು ನಿರ್ಣಯಿಸಲು "ಮನುಕುಲದ ಉಳುವಿಗಾಗಿ ರಾಷ್ಟ್ರ-ಅಂತಾರಾಷ್ಟ್ರೀಯ ಚಿಂತಕರ ಸಮಾವೇಶ"ಗಳನ್ನು ದೇಶದೆಲ್ಲೆಡೆ ಜರುಗಿಸಿ, ಸ್ಥಳೀಯರ ಅನುಭವದೊಂದಿಗೆ ಹೊರಹೊಮ್ಮಿದ ಚರ್ಚೆಯ ಅಂಶಗಳು ನಿಜಕ್ಕೂ ರೋಚಕವಾಗಿದ್ದವು.

ರಾಷ್ಟ್ರೀಯ ಚಿಂತನೆಯಲ್ಲಿ ಮೂಡಿಬಂದ ಮಹತ್ವದ ಸಂಗತಿಗಳೆಂದರೆ: ಇಂದಿನ ಶಿಕ್ಷಣದಿಂದಾಗಿ ನಮ್ಮ ಜನಮಾನಸ ಪಾರಂಪರಿಕ ಸ್ವಾವಲಂಬನೆಯ ಬದುಕಿಗೆ ಪ್ರತಿಯಾಗಿ, ಅವಲಂಬನೆಯ ಮಾನಸಿಕತೆಯನ್ನು ರೂಢಿಸಿಕೊಳ್ಳುವಂತಾಗಿದೆ. ಸ್ವಾತಂತ್ರ್ಯಾನಂತರವೂ ವಸಾಹತು ನೀತಿಯ ಶೈಕ್ಷಣಿಕ ವಾತಾವರಣದಿಂದ ನಾವು ಹೊರಬರಲಾಗಿಲ್ಲ. ಇದರಿಂದಾಗಿ, ನಮ್ಮ ಶಿಕ್ಷಣ ವ್ಯವಸ್ಥೆಯು ನಿರುದ್ಯೋಗ ನಿರ್ಮಾಣದ ಬೃಹತ್ ಕಾರ್ಖಾನೆಯಾದಂತಾಗಿದೆ. ಶಿಕ್ಷಣದ ಯಾವ ಹಂತದಲ್ಲೂ ಶ್ರಮದ ಮಹತ್ವವನ್ನು ಬೋಧಿಸುತ್ತಿಲ್ಲವಾದ್ದರಿಂದ, ಶ್ರಮಜೀವನವನ್ನು ಸರ್ವರೂ ನಿಕೃಷ್ಟವಾಗಿ ಕಾಣುವಂತಾಗಿದೆ. ಅಕ್ಷರ ಕಲಿತ ಬಹುತೇಕರು ಶ್ರಮಿಕರಾಗದೇ, ನಿರಾಯಾಸವಾಗಿ ಆದಾಯ ತರುವ ಉದ್ಯೋಗಗಳನ್ನು ಅರಸತೊಡಗಿದ್ದಾರೆ. ತತ್ಪರಿಣಾಮ, ಇಂದು ಗ್ರಾಮಗಳು ಅನಾಥಾಶ್ರಮಗಳಂತೆ ತಾತ್ಸಾರಕ್ಕೊಳಗಾಗಿವೆ. ಕಲಿತವರು, ಕಲಿಯದವರು ನಗರಗಳತ್ತ ಮುಖ ಮಾಡಿದ್ದಾರೆ.

ನಾವು ಯಂತ್ರ ನಾಗರೀಕತೆಯ ಗುಲಾಮರಾಗಿರುವುದು ನಿರುದ್ಯೋಗವನ್ನು ಗಣನೀಯವಾಗಿ ಹೆಚ್ಚಿಸಿದೆ. ಯಂತ್ರದ ಅವಶ್ಯಕತೆಯನ್ನು ಸಾಂದರ್ಭಿಕವಾಗಿ ಪರಿಗಣಿಸಬೇಕೇ ಹೊರತು, ಸಾರ್ವತ್ರಿಕವಾಗಿ ಅಲ್ಲ ಎಂಬ ಪರಿಜ್ಞಾನದ ಕೊರತೆ ನಮ್ಮನ್ನು ಅಪಾಯದ ಅಂಚಿಗೆ ತಂದು ನಿಲ್ಲಿಸಿದೆ. ನಿವೃತ್ತಿ ನಂತರ ನೌಕರರ ಅನುಭವದ ಲಾಭ ಸಮಾಜಕ್ಕಾಗಬೇಕು ಎಂಬುದೇನೋ ಸರಿ. ಆದರೇ, ಅದು ನಿರಾಪೇಕ್ಷೆಯ ಸೇವೆಯಾಗಿರಬೇಕು. ಪಿಂಚಣಿಯೊಂದಿಗೆ ಗಳಿಕೆಮಾಡಿ ಇತರರನ್ನು ಸಂಕಷ್ಟಕ್ಕೀಡು ಮಾಡುವ ಅನಾರೋಗ್ಯಕರ ಪೈಪೋಟಿಯಾಗಬಾರದು.

ನೌಕರನೊಬ್ಬ ನಿವೃತ್ತಿ ವೇತನ/ಸೌಲಭ್ಯ ಪಡೆದೂ, ಮತ್ತೆ ಸಾಮಾನ್ಯ ಉದ್ಯೋಗಗಳಲ್ಲಿ ತೊಡಗಿಸಿಕೊಳ್ಳಲು ಅನುಮತಿಸುವ ನೀತಿಯು ನಿರುದ್ಯೋಗ ನಿವಾರಣೆಗೆ ಪ್ರಮುಖ ಅಡಚಣೆಯಾಗಿದೆ. ಹೀಗಾಗಿ, ಸಾಮರ್ಥವುಳ್ಳ ಯುವಕರು ಅವಕಾಶ ವಂಚಿತರಾಗಿ, ಒಂದೋ ಅವರು ತಮ್ಮ ದೈವವನ್ನು ಹಳಿಯುತ್ತ ಸೊರಗುತ್ತಾರೆ. ಇಲ್ಲವೇ, ಅನಿವಾರ್ಯವಾಗಿ ಸಮಾಜ ವಿರೋಧಿ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುತ್ತಿದ್ದಾರೆ ಎಂಬೆಲ್ಲಾ ವಿಷಯಗಳ ಗಂಭೀರ ಚರ್ಚೆಯ ನಂತರ ಈ ಕೆಳಗಿನ ಗೊತ್ತುವಳಿಗಳು ಸಮಸ್ಯೆಗಳಿಗೆ ಪರಿಹಾರವಾಗಿ ಸೂಚಿಸಲ್ಪಟ್ಟವು.

- ನಮ್ಮ ಇಂದಿನ ಶಿಕ್ಷಣ ಪದ್ಧತಿಯೇ ದೇಶದ ಅವನತಿಗೆ ಕಾರಣ, ಹೀಗಾಗಿ 10ನೇ ತರಗತಿ ನಂತರ ಶಾಲೆಗಳನ್ನು ತಾತ್ಕಾಲಿಕವಾಗಿ ನಿಲ್ಲಿಸುವುದು, ಇಲ್ಲವೇ ನಿಯಂತ್ರಿಸುವುದು.

- ಕೃಷಿ ಉತ್ಪನಗಳಗೆ ಬೆಲೆ ನಿಗದಿ ಪ್ರಾಧಿಕಾರ ರಚಿಸಿ, ಅವುಗಳ ಮೌಲ್ಯವನ್ನು ಹಲವುಪಟ್ಟು ಹೆಚ್ಚಿಸಿ, ಕೃಷಿಯತ್ತ  ಉದ್ಯೋಗಾಕಾಂಕ್ಷಿಗಳು ಮುಖಮಾಡುವಂತಾಗಿಸುವುದು.
- ವೇತನ ಆಯೋಗಗಳನ್ನು ಮುಚ್ಚಿಹಾಕಿ, ವೇತನ ಹೆಚ್ಚಳ, ತುಟ್ಟಿಭತ್ಯೆ, ಮುಂತಾದವುಗಳನ್ನು ನಿಲುಗಡೆ ಮಾಡಿ ಎಲ್ಲ ಸರಕಾರಿ/ ಖಾಸಗಿ ನೌಕರರಿಗೆ (ಕಂಪ್ಯೂಟರ್ ಕೂಲಿಗಳಾದಿಯಾಗಿ) ಗ್ರಾಮೀಣ ಉದ್ಯೋಗ ಖಾತರಿ ದರದ ವೇತನವನ್ನು ನಿಗದಿಗೊಳಸುವುದು.
- ನೌಕರರಿಗೆ ನಿವೃತ್ತಿ ವೇತನ/ ಸೌಲಭ್ಯಗಳನ್ನು ರದ್ದುಗೊಳಸುವುದು ಇಲ್ಲವೇ ರೈತರು, ದೈಹಿಕ ಶ್ರಮಿಕರಿಗೂ ಅವುಗಳನ್ನು ಜಾರಿಗೊಳಸುವುದು.
- ಕೈ-ಕುಶಲತೆಯನ್ನು ಕಿತ್ತುಕೊಳ್ಳುವ ಎಲ್ಲ ಯಂತ್ರಗಳನ್ನು ನಿಷೇಧಿಸಿ ಗೃಹ, ಗ್ರಾಮೀಣ ಕೈಗಾರಿಕೆಗಳನ್ನು ಪುನರುಜ್ಜೀವನಗೊಳಸುವ ಮೂಲಕ ಭಾರತವನ್ನು ನಗರ-ಬರಡಾಗಿಸದೇ, ಗ್ರಾಮಗಳ ಸ್ವರ್ಗವಾಗಿಸುವುದು.
- ನಿವೃತ್ತರು ಪುನರ್ ಕೆಲಸ ಪಡೆದು, ಅರ್ಹ-ನಿರುದ್ಯೋಗಿಗಳನ್ನು ವಂಚಿಸುತ್ತಿರುವುದನ್ನು ತಡೆಯುವದು. ಉದಾಹರಣೆಗೆ: ನಿವೃತ್ತ ನ್ಯಾಯಾಧೀಶರು ಮತ್ತೆ ನ್ಯಾಯವಾದಿಗಳಾಗಿ ಇಲ್ಲವೇ, ಆಯೋಗ, ಮಂಡಳ, ಪ್ರಾಧಿಕಾರ, ವೇದಿಕೆ, ಮಧ್ಯಸ್ಥಿಕೆ, ರಾಜಿಸಂಧಾನ, ಮುಂತಾದೆಡೆಗಳಲ್ಲಿ ಕೆಲಸ ದೊರಕಿಸಿಕೊಂಡು ಅವುಗಳನ್ನು ತಮ್ಮ ಪುನರ್-ವಸತಿ ನೆಲೆಗಳಾಗಿ ಪರಿವರ್ತಿಸಿರುವುದನ್ನು ಪ್ರತಿಬಂಧಿಸುವುದು.

ಈ ನಿರ್ಣಯಗಳ ಜಾರಿಗೆ ಸಂವಿಧಾನದ ರಾಜ್ಯನೀತಿ ನಿರ್ದೇಶಕ ತತ್ವಗಳ ಹಿನ್ನೆಲೆಯಲ್ಲಿ, ಕಾನೂನು ಕ್ರಮ ಕೈಗೊಳ್ಳಲು ಹಲವಾರು ಬಾರಿ ಕೇಂದ್ರ ಮತ್ತು ಎಲ್ಲ ರಾಜ್ಯ ಸರ್ಕಾರಗಳಗೆ ಮಾಡಿದ ವಿನಂತಿ ಫಲ ನೀಡದಿದ್ದರ ಪರಿಣಾಮ, ಅನಿವಾರ್ಯವಾಗಿ ಅರ್ಜಿದಾರರು ಇವೇ ಮುಂತಾದ ಆಶಯಗಳ ಸಾಕಾರಕ್ಕಾಗಿ "ಸುಸ್ಥಿರ ಭಾರತ ಪುನರ್-ಸ್ಥಾಪನಾ ಅಧಿನಿಯಮ" ಜಾರಿಗೊಳಸಲು ಭಾರತದ ಒಕ್ಕೂಟಕ್ಕೆ ನಿರ್ದೇಶನ ನೀಡುವಂತೆ ಕೋರಿ ಸಲ್ಲಿಸಿದ ಅರ್ಜಿಯು ಅಂತಿಮ ವಿಚಾರಣಾ ಹಂತದಲ್ಲಿದ್ದು, ಅರ್ಜಿಗೆ ಸರ್ಕಾರದ ಪರವಾಗಿ ತೀವ್ರ ವಿರೋಧ ವ್ಯಕ್ತಪಡಿಸಿ, ಇಂಥ ರಿಟ್ ಅರ್ಜಿಯ ಔಚಿತ್ಯ, ನಿಲುಗಡೆ (maintainability), ಕಾನೂನಾತ್ಮಕತೆ, ಜಾರಿಯ ಸಾಧ್ಯತೆ, ನಿರ್ದೇಶನ ನೀಡಲು ನ್ಯಾಯಾಂಗಕ್ಕಿರುವ ಇತಿ-ಮಿತಿಗಳನ್ನು ಪ್ರಶ್ನಿಸಲಾಗಿದೆ. ಮೊಕದ್ದಮೆಯಲ್ಲಿ ಸಾರ್ವಜನಿಕ ಹಿತಾಸಕ್ತಿ ಅಡಗಿದೆಯೇ? ಮುಂತಾದ ವಿವಾದಾಂಶಗಳ ಜೊತೆ ಪ್ರಸ್ತಾಪಿತ ವಿಷಯಗಳ ಕುರಿತಾಗಿಯೂ ವಾದ ಮಂಡನೆಯಾಗಬೇಕಿದೆ.

# ಎಂಟನೆಯ ಕನ್ನಡ ಕಲ್ಪಿತ ನ್ಯಾಯಾಲಯ ಸ್ಪರ್ಧೆಯ ನಿಯಮಗಳು–2021

## ನಿಯಮ 1 : ಪರಿಚಯ

1. ಸ್ಪರ್ಧೆಯ ನಿರ್ವಾಹಕರು ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದಿಂದ ರಚಿಸಲ್ಪಟ್ಟ 'ಸ್ಪರ್ಧಾ ಸಮಿತಿ' ("ಸಿಸಿ") ಆಗಿರುತ್ತದೆ.
2. ಈ ನಿಯಮಗಳಿಗೆ ಅನುಸಾರವಾಗಿ ಸ್ಪರ್ಧೆಯನ್ನು ನಡೆಸಲಾಗುತ್ತದೆ ಮತ್ತು ಎಲ್ಲಾ ತಂಡಗಳು ಹಾಗೂ ಭಾಗವಹಿಸುವವರು ಈ ನಿಯಮಗಳನ್ನು ಓದಿದ್ದಾರೆ ಮತ್ತು ಅರ್ಥ ಮಾಡಿ ಕೊಂಡಿದ್ದಾರೆಂದು ಭಾವಿಸಲಾಗುತ್ತದೆ.

## ನಿಯಮ 2 : ಭಾಗವಹಿಸುವಿಕೆ ಮತ್ತು ಅರ್ಹತೆ

1. **ತಂಡದ ಸದಸ್ಯರ ಅರ್ಹತೆ** : ಭಾರತದ ವಕೀಲ ಪರಿಷತ್ ನಿಂದ ಮಾನ್ಯತೆ ಪಡೆದ ಕರ್ನಾಟಕ ರಾಜ್ಯದ ಕಾನೂನು ಮಹಾವಿದ್ಯಾಲಯಗಳು ಈ ಸ್ಪರ್ಧೆಯಲ್ಲಿ ಭಾಗವಹಿಸಲು ಅರ್ಹತೆಯನ್ನು ಹೊಂದಿರುತ್ತವೆ.
2. **ತಂಡದ ಸಂಯೋಜನೆ ಮತ್ತು ಆಯ್ಕೆ** : ಸ್ಪರ್ಧೆಯಲ್ಲಿ ಭಾಗವಹಿಸಲಿಚ್ಛಿಸುವ ಎಲ್ಲಾ ಕಾನೂನು ಮಹಾವಿದ್ಯಾಲಯಗಳು, ಇಬ್ಬರು ವಾದ ಮಂಡಿಸುವ ಮತ್ತು ಒಬ್ಬ ಸಂಶೋಧನಾ ವಿದ್ಯಾರ್ಥಿಗಳನ್ನೊಳಗೊಂಡ ಮೂರು ಜನರ ತಂಡವನ್ನು ಸ್ಪರ್ಧೆಗೆ ಕಳುಹಿಸಬೇಕು. ಯಾವುದೇ ವೀಕ್ಷಕ ಸದಸ್ಯರನ್ನು ಹೊಂದಲು ತಂಡಗಳನ್ನು ಅನುಮತಿಸಲಾಗುವುದಿಲ್ಲ.
3. **ತಂಡಗಳಿಗೆ ಹೊರಗಿನ ಸಹಾಯ**: ಎಲ್ಲಾ ಸಂಶೋಧನೆ ಮತ್ತು ಬರವಣಿಗೆಗಳು ಆಯಾ ತಂಡದ ಸದಸ್ಯರ ಸ್ವಪ್ರಯತ್ನದ ಫಲವಾಗಿರಬೇಕು.

## ನಿಯಮ 3: ತಂಡದ ನೋಂದಣಿ

1. ಸ್ಪರ್ಧೆಯಲ್ಲಿ ಭಾಗವಹಿಸಲಿಚ್ಛಿಸುವ ಕಾನೂನು ಮಹಾವಿದ್ಯಾಲಯಗಳು 20ನೇ ಜೂನ್ 2021 ರೊಳಗಾಗಿ ತಮ್ಮ ಭಾಗವಹಿಸುವಿಕೆಯನ್ನು ಖಚಿತಪಡಿಸಬೇಕು.
2. ಕೆಳಕಂಡ ಗೂಗಲ್ ಫಾರ್ಮ್ ಭರ್ತಿ ಮಾಡುವ ಮೂಲಕ ತಾತ್ಕಾಲಿಕ ನೋಂದಣಿಯನ್ನು ಮಾಡತಕ್ಕದು.

   https://forms.gle/RYN6wGUxDzk4fDSs8
3. ಅಂತಿಮ ನೋಂದಣಿ 3ನೇ ಜುಲೈ 2021 ರೊಳಗೆ ಪೂರ್ಣಗೊಳ್ಳುತ್ತದೆ.

4. ಸ್ಪರ್ಧೆಯಲ್ಲಿ ಭಾಗವಹಿಸುವ ತಂಡಗಳು ಆಯಾ ಕಾಲೇಜಿನ ಪ್ರಾಂಶುಪಾಲರಿಂದ ಸಹಿ ಮಾಡಲ್ಪಟ್ಟ ನೋಂದಣಿ ಫಾರ್ಮ್‌ನ್ನು ಸಲ್ಲಿಸತಕ್ಕದ್ದು.

5. ಅಂತಿಮ ನೋಂದಣಿ ಪ್ರಕ್ರಿಯೆಯನ್ನು ಪೂರ್ಣಗೊಳಿಸುವುದರ ಜೊತೆಗೆ, ಮೊದಲು ನೋಂದಣಿ ಮಾಡಿಸಿಕೊಂಡ ಮೊದಲ 30 (ಮೂವತ್ತು) ತಂಡಗಳನ್ನು ಸ್ಪರ್ಧೆಗೆ ಪರಿಗಣಿಸಲಾಗುವುದು.

6. ಪ್ರತಿ ತಂಡವು ಸಂಘಟಕರು ನಿಗದಿಪಡಿಸಿದ ತಂಡದ ಸಂಕೇತ (ಕೋಡ್)ವನ್ನು ಹೊಂದಿರತಕ್ಕದ್ದು ಮತ್ತು ಅಂತಿಮ ನೋಂದಣಿಯ ನಂತರ ಈ ಸಂಕೇತವನ್ನು ಆಯಾ ತಂಡಗಳಿಗೆ ಇ–ಮೇಲ್ ಮೂಲಕ ತಿಳಿಸಲಾಗುವುದು.

7. ಆಯಾ ತಂಡಗಳು ತಮ್ಮ ಮೂಲ ಕಾಲೇಜು/ಸಂಸ್ಥೆ/ವಿಶ್ವವಿದ್ಯಾಲಯದ ಗುರುತಿನ ಬಹಿರಂಗ ಪಡಿಸುವಿಕೆಯನ್ನು ನೋಂದಣಿ ರೂಪದಲ್ಲಿ ಮಾತ್ರ ಮಾಡತಕ್ಕದ್ದು.

8. ಸ್ಪರ್ಧೆಯ ಸಮಯದಲ್ಲಿ ತಂಡಗಳು ತಮ್ಮ ಗುರುತನ್ನು ಬಹಿರಂಗಪಡಿಸಿಕೊಳ್ಳುವುದು ತಂಡಗಳ ಅನರ್ಹತೆಗೆ ಕಾರಣವಾಗುತ್ತದೆ.

9. ಭಾಗವಹಿಸುವ ತಂಡಗಳ ಅಥವಾ ಅವರ ಕಾಲೇಜುಗಳ ಹೆಸರುಗಳು ಲಿಖಿತ ವಾದ ಪತ್ರಗಳಲ್ಲಿ ಕಾಣಿಸಿಕೊಳ್ಳತಕ್ಕದ್ದಲ್ಲ ಹಾಗೂ ವಾದ ಪತ್ರಗಳಲ್ಲಿ ತಂಡದ ಸದಸ್ಯರ ಸಹಿಯನ್ನು ನಿಷೇಧಿಸಲಾಗಿದೆ.

## ನಿಯಮ 4: ನ್ಯಾಯಾಧೀಶರು

1. **ನ್ಯಾಯಾಧೀಶ ಪೀಠ:** ಪ್ರಾಥಮಿಕ ಹಾಗೂ ಸುಧಾರಿತ ಸುತ್ತುಗಳನ್ನು ಇಬ್ಬರು (2) ನ್ಯಾಯಾಧೀಶರ ಪೀಠಗಳಿಂದ ನಿರ್ಣಯಿಸಲಾಗುತ್ತದೆ. ಸ್ಪರ್ಧೆಯ ಅಂತಿಮ ಸುತ್ತನ್ನು ದೊಡ್ಡ ಬೆಸಸಂಖ್ಯೆಯ ಪೀಠ ನಿರ್ಧರಿಸುತ್ತದೆ.

2. **ತಂಡಗಳ ಅನಾಮಧೇಯತೆ** : ಸ್ಪರ್ಧೆಯ ಸಮಯದಲ್ಲಿ ತಂಡದ ಗುರುತನ್ನು ಸಂಪೂರ್ಣವಾಗಿ ಗೌಪ್ಯವಾಗಿಡಲಾಗುತ್ತದೆ. ವೈಯಕ್ತಿಕ ಭಾಗವಹಿಸುವವರ ಗುರುತುಗಳನ್ನು ತಿಳಿಯಲು ನ್ಯಾಯಾಧೀಶರಿಗೆ ಅವಕಾಶವಿದ್ದರೂ, ಭಾಗವಹಿಸುವವರು ಪ್ರತಿನಿಧಿಸುವ ಸಂಸ್ಥೆ/ ಕಾಲೇಜು/ವಿಶ್ವವಿದ್ಯಾಲಯಗಳ ಗುರುತು ನ್ಯಾಯಾಧೀಶರಿಗೆ ಬಹಿರಂಗವಾಗುವುದಿಲ್ಲ.

## ನಿಯಮ 5: ಸ್ಪರ್ಧೆಯ ಸಮಸ್ಯೆ ಅಥವಾ ನಿಯಮಗಳ ಸ್ಪಷ್ಟೀಕರಣ

ಅಣಕು ನ್ಯಾಯಾಲಯ ಸಮಸ್ಯೆ ಅಥವಾ ಈ ನಿಯಮಗಳ ಸ್ಪಷ್ಟೀಕರಣಕ್ಕಾಗಿ ತಂಡಗಳು ಲಿಖಿತ ವಿನಂತಿಗಳನ್ನು ಸಲ್ಲಿಸಬಹುದು. ಅಂತಹ ಸ್ಪಷ್ಟೀಕರಣಗಳಿಗಾಗಿ ವಿನಂತಿಗಳನ್ನು 7ನೇ ಜುಲೈ

2021ರೊಳಗೆ ಸಲ್ಲಿಸಬೇಕು. ತಂಡಗಳು ಸ್ಪಷ್ಟೀಕರಣಕ್ಕಾಗಿ ವಿನಂತಿಗಳನ್ನು kslukannadamoot@gmail.com ಇ-ಮೇಲ್ ಮೂಲಕ "8ನೇ ಕನ್ನಡ ಕಲ್ಪಿತ ನ್ಯಾಯಾಲಯ ಸ್ಪರ್ಧೆಯ ಸ್ಪಷ್ಟೀಕರಣ" ಶೀರ್ಷಿಕೆಯೊಂದಿಗೆ ಸಲ್ಲಿಸಬೇಕಾಗುತ್ತದೆ.

## ನಿಯಮ 6 : ಲಿಖಿತ ವಾದ ಪತ್ರಗಳ ಸಲ್ಲಿಕೆ

1. ಲಿಖಿತ ವಾದ ಪತ್ರಗಳನ್ನು ನುಡಿ ತಂತ್ರಾಂಶ ಬಳಸಿ ಮೈಕ್ರೋ ಸ್ಟಾಫ್ಟವೇರಿನಲ್ಲಿ ಬೆರಳಚ್ಚು ಮಾಡಿ, ಪ್ರತಿ ಸಾಲುಗಳ ನಡುವೆ (ಡಬಲ್ ಲೈನಿಂಗ್ ಸ್ಪೇಸ್) ಅಂತರ ಇರುವಂತೆ (ಅಕ್ಷರ ಆಕಾರ:- ನುಡಿ 01 ಇ, ಅಕ್ಷರ ಅಳತೆಯು 14 ಇರುವಂತೆ) ಪಿಡಿಎಫ್ ರೂಪದಲ್ಲಿ ಸಲ್ಲಿಸತಕ್ಕದ್ದು.
2. ಲಿಖತ ವಾದ ಪತ್ರಗಳ ಹಾಳೆಯ ಮಾರ್ಜಿನ್, ಹಾಳೆಯ ಎಲ್ಲಾ ನಾಲ್ಕು ಬದಿಯಲ್ಲಿ ಅಂದರೆ ಮೇಲೆ: ಕೆಳಗೆ ಮತ್ತು ಎಡಬದಿ : ಬಲಬದಿ- 2.5 ಸೆಂಟಿ ಮೀಟರ್ ಮಾರ್ಜಿನ್ ಇರತಕ್ಕದ್ದು.
3. ಸ್ಪರ್ಧೆಯಲ್ಲಿ ಭಾಗವಹಿಸಲಚ್ಛಿಸುವ ಕಾನೂನು ಮಹಾವಿದ್ಯಾಲಯಗಳು 7ನೇ ಜುಲೈ 2021 ರೊಳಗಾಗಿ ಅಥವಾ ಮುಂಚಿತವಾಗಿ ಮಿಂಚಂಚೆ ಮೂಲಕ ಲಿಖಿತ ವಾದ ಪತ್ರಗಳನ್ನು ಸಲ್ಲಿಸತಕ್ಕದ್ದು.
4. ಪ್ರತಿ ಲಿಖಿತ ವಾದ ಪತ್ರಗಳು ಈ ಕೆಳಗಿನ ಮಾಹಿತಿಯನ್ನು ಮಾತ್ರ ಹೊಂದಿರಬೇಕು: ತಂಡದ ಸಂಕೇತ, ನ್ಯಾಯಾಲಯದ ಹೆಸರು, ಪಕ್ಷಗಾರರ ಹೆಸರು, ಪ್ರಕರಣದ ಸ್ವರೂಪ (ಸಿವಿಲ್ /ಕ್ರಿಮಿನಲ್/ರಿಟ್/ಇತ್ಯಾದಿ) ಮತ್ತು ಲಿಖಿತ ವಾದ ಪತ್ರಗಳ ಶೀರ್ಷಿಕೆ (ಅಂದರೆ, "ಪ್ರತಿವಾದಿಗೆ ಲಿಖಿತ ವಾದ ಪತ್ರ" ಅಥವಾ "ಮೇಲ್ಮನವಿದಾರರಿಗೆ ಲಿಖಿತ ವಾದ ಪತ್ರ").
5. ಲಿಖಿತ ವಾದ ಪತ್ರವು 30 ಪುಟಗಳನ್ನು ಮೀರಿರಬಾರದು. ಲಿಖಿತ ವಾದ ಪತ್ರಗಳು ಕೆಳಕಂಡ ವಿವರಣೆಗಳನ್ನು ಒಳಗೊಂಡಿರತಕ್ಕದ್ದು; ಪರಿವಿಡಿ, ಮೂಲ ಆಕರಗಳು, ನ್ಯಾಯಿಕ ವ್ಯಾಪ್ತಿ, ಸತ್ಯಾಂಶ, ಪ್ರಾರ್ಥನೆ ಮತ್ತು ಅನುಬಂಧ.
6. ಒಮ್ಮೆ ಸಲ್ಲಿಸಿದ ಲಿಖಿತ ವಾದ ಪತ್ರಗಳನ್ನು ಹಿಂದಿರುಗಿಸಲಾಗುವುದಿಲ್ಲ. ಲಿಖಿತ ವಾದ ಪತ್ರಗಳನ್ನು ಸಲ್ಲಿಸಿದ ನಂತರ, ಯಾವುದೇ ಪರಿಷ್ಕರಣೆಗಳಿಗೆ, ತಿದ್ದುಪಡಿಗಳಿಗೆ ಅಥವಾ ಸೇರ್ಪಡೆಗಳಿಗೆ ಅನುಮತಿಸಲಾಗುವುದಿಲ್ಲ.
7. ಪ್ರತಿ ತಂಡವು ವಿವಾದದ ಎರಡೂ ಪಕ್ಷಗಾರರಿಗೆ ಲಿಖಿತ ವಾದದ ಪತ್ರಗಳನ್ನು ಲಿಖಿತವಾಗಿ ಸಿದ್ಧಪಡಿಸಬೇಕು (ಅರ್ಜಿದಾರ / ಮೇಲ್ಮನವಿ ಮತ್ತು ಪ್ರತಿವಾದಿ).
8. ಲಿಖಿತ ವಾದ ಪತ್ರಗಳನ್ನು ತಂಡದ ಸಂಕೇತದ ಮೂಲಕ ಗುರುತಿಸಲಾಗುವುದು. ಸದರಿ ಸಂಕೇತವನ್ನು ಲಿಖಿತ ವಾದ ಪತ್ರಗಳ ಮೇಲ್ಭಾಗದ ಬಲಬದಿಯಲ್ಲಿ ನಮೂದಿಸತಕ್ಕದ್ದು.

9. ಲಿಖಿತ ವಾದ ಪತ್ರಗಳು ಕನ್ನಡ ಭಾಷೆಯಲ್ಲಿರಬೇಕು.

10. ಎಲ್ಲಾ ತಂಡಗಳು ಅನುಬಂಧವನ್ನು ಸೇರಿಸುವ ಆಯ್ಕೆಯನ್ನು ಹೊಂದಿವೆ. ಅನುಬಂಧವು ಕಾನೂನಿನ ಅಂಶಗಳನ್ನು ಒಳಗೊಂಡಿರಬಹುದು ಮತ್ತು ಯಾವುದಾದರೂ ಉಲ್ಲೇಖಿಸಲಾದ ಪ್ರಮುಖ ತೀರ್ಪುಗಳ ಸಾರಾಂಶವನ್ನು ಹೊಂದಿರಬಹುದು. ಅನುಬಂಧವು 05 ಪುಟಗಳನ್ನು ಮೀರಬಾರದು.

## ನಿಯಮ 7: ಸ್ಪರ್ಧೆಯ ಕಾರ್ಯವಿಧಾನಗಳು

1. ಮೌಖಿಕ ಸುತ್ತುಗಳನ್ನು ಆನ್‌ಲೈನ್ ಮೂಲಕ 10ನೇ ಜುಲೈ 2021 ರಿಂದ 11ನೇ ಜುಲೈ 2021 ರವರೆಗೆ ನಡೆಸಲಾಗುವುದು. ಸ್ಪರ್ಧೆಗೆ ಸಂಬಂಧಿಸಿದ ಆನ್‌ಲೈನ್ ವಿವರಗಳನ್ನು ಆಯಾ ತಂಡಗಳಿಗೆ ಇ-ಮೇಲ್ ಮೂಲಕ ತಿಳಿಸಲಾಗುವುದು.

2. **ಸಲಕರಣೆಗಳ ವೈಫಲ್ಯ:** ಇಂಟರ್ನೆಟ್ ಸಂಪರ್ಕ ಸಮಸ್ಯೆಗಳು ಅಥವಾ ಯಾವುದೇ ತಂಡದ ಯಾವುದೇ ಸದಸ್ಯರು ಅನುಭವಿಸಬಹುದಾದ ಇಂಟರ್ನೆಟ್ ವೈಫಲ್ಯಕ್ಕೆ ಸಿ.ಸಿ. ಜವಾಬ್ದಾರಿಯಾಗಿರುವುದಿಲ್ಲ. ತಂಡಗಳು ಮತ್ತು ಅವರ ಸದಸ್ಯರು ಸಮರ್ಪಕ ಅಂತರ್ಜಾಲದ ಬ್ಯಾಕಪ್‌ಗಳನ್ನು ಹೊಂದಿದ್ದಾರೆ ಎಂಬುದನ್ನು ಖಚಿತಪಡಿಸಿಕೊಳ್ಳಲು ವಿನಂತಿಸಲಾಗಿದೆ. ಯಾವುದೇ ತಂಡದ ಸದಸ್ಯರುಗಳಿಗೆ ಯಾವುದೇ ಉಪಕರಣಗಳು, ಇಂಟರ್ನೆಟ್ ಸಂಪರ್ಕ ಅಥವಾ ಮೊಬೈಲ್ ಡೇಟಾ ಪ್ಯಾಕ್‌ಗಳನ್ನು ಒದಗಿಸಲು ಸಿ.ಸಿ. ಜವಾಬ್ದಾರಿಯಾಗಿರುವುದಿಲ್ಲ.

3. ಸ್ಪರ್ಧೆಯಲ್ಲಿ ಒಟ್ಟು 4 ಹಂತಗಳಿದ್ದು, ಇದರಲ್ಲಿ ನಿರ್ಗಮಿಸುವ ಸುತ್ತು, ಕ್ವಾರ್ಟರ್ ಫೈನಲ್ಸ್, ಸೆಮಿ ಫೈನಲ್ ಮತ್ತು ಫೈನಲ್ ಸುತ್ತುಗಳು ಇರುತ್ತವೆ.

   - **ನಿರ್ಗಮಿಸುವ ಸುತ್ತು:** ಆಯೋಜಕರಿಂದ ರಚಿಸಲ್ಪಟ್ಟ ಪಟ್ಟಿಗೆ ಅನುಗುಣವಾಗಿ ಎಲ್ಲಾ ತಂಡಗಳು ಈ ಸುತ್ತಿನಲ್ಲಿ ಭಾಗವಹಿಸುತ್ತವೆ.

   - **ಕ್ವಾರ್ಟರ್ ಫೈನಲ್ಸ್ ಸುತ್ತು** : ನಿರ್ಗಮಿಸುವ ಸುತ್ತಿನಿಂದ ಉನ್ನತ ಶ್ರೇಯಾಂಕಿತ ಎಂಟು ತಂಡಗಳು ಕ್ವಾರ್ಟರ್ ಫೈನಲ್‌ಗೆ ಮುನ್ನಡೆಯಲಿವೆ.

   - **ಸೆಮಿಫೈನಲ್ ಸುತ್ತು:** ಕ್ವಾರ್ಟರ್ ಫೈನಲ್‌ನಲ್ಲಿ ಭಾಗವಹಿಸಿದ ತಂಡಗಳಲ್ಲಿ ಒಟ್ಟು 4 ತಂಡಗಳು ಅವರು ಪಡೆದ ಅಂಕಗಳ ಆಧಾರದ ಮೇಲೆ ಸೆಮಿ ಫೈನಲ್ ತಲಪುತ್ತವೆ.

   - **ಫೈನಲ್ ಸುತ್ತು:** ಸೆಮಿಫೈನಲ್‌ನಲ್ಲಿ ಭಾಗವಹಿಸಿದ ತಂಡಗಳಲ್ಲಿ, 2 ತಂಡಗಳು ಅವರು ಪಡೆದ ಅಂಕಗಳ ಆಧಾರದ ಮೇಲೆ ಫೈನಲ್ (ಅಂತಿಮ) ಸುತ್ತನ್ನು ತಲಪುತ್ತವೆ.

4. ಪ್ರತಿ ಮೌಖಿಕ ಸುತ್ತಿನ ಸಮಯದಲ್ಲಿ, ಪ್ರತಿತಂಡದಿಂದ ಇಬ್ಬರು (2) ನ್ಯಾಯವಾದಿಗಳು ಮತ್ತು ಒಬ್ಬ ಸಂಶೋಧಕರು ಮಾತ್ರ ಆನ್‌ಲೈನ್ ಮೂಲಕ ಹಾಜರಾಗಲು ಅನುಮತಿಸಲಾಗುವುದು. ತಂಡಗಳ ಪರವಾಗಿ ಮತ್ತಾರು ಆನ್‌ಲೈನ್ ಮೂಲಕ ಹಾಜರಾಗುವಂತಿಲ್ಲ.

## ನಿಯಮ 8: ಸ್ಪರ್ಧೆಯ ಅಂಕಗಳು

1. ಮೌಖಿಕ ವಾದದ ಒಟ್ಟು 100 ಅಂಕಗಳ ಆಧಾರದ ಮೇಲೆ ಪ್ರತಿ ತಂಡದ ಸಾಧನೆಯನ್ನು ನಿರ್ಧರಿಸಲಾಗುವುದು. ಮೌಖಿಕ ವಾದದ ಉದ್ದೇಶಕ್ಕಾಗಿ ಕಾನೂನಿನ ಜ್ಞಾನ, ಮೂಲ ಆಕರಗಳ ಬಳಕೆ, ಕಾನೂನಿನ ವ್ಯಾಖ್ಯಾನ, ವಾದ ಮಂಡನೆಯ ಜಾಣ್ಮೆ, ಮನವೊಲಿಸುವಿಕೆ ಶೈಲಿ, ಸಮತೋಲನ ಮತ್ತು ನ್ಯಾಯಾಲಯದ ನಡವಳಿಕೆಗಳು ಮುಂತಾದ ಅಂಶಗಳನ್ನು ಪರಿಗಣಿಸಲಾಗುವುದು.

2. ಲಿಖಿತ ವಾದ ಪತ್ರಗಳಿಗೆ ಪ್ರತ್ಯೇಕ 50 ಅಂಕಗಳನ್ನು ನಿಗದಿಪಡಿಸಲಾಗಿದೆ. ಲಿಖಿತ ವಾದ ಪತ್ರಗಳನ್ನು ಈ ಕೆಳಗಿನ ಮಾನದಂಡದ ಆಧಾರದ ಮೇಲೆ ಗುರುತಿಸಲಾಗುತ್ತದೆ. ಕಾನೂನಿನ ಪರಿಜ್ಞಾನ, ಕಾನೂನಿನ ಉಪಬಂಧಗಳ ವಿಶ್ಲೇಷಣೆ, ಸಂಶೋಧನೆಯ ಆಳ ಮತ್ತು ಬಳಕೆ, ಸ್ಪಷ್ಟತೆ ಮತ್ತು ನಿಖರತೆ, ಮೂಲ ಆಕರಗಳ ಉಲ್ಲೇಖ ಮತ್ತು ವ್ಯಾಕರಣ ಶೈಲಿ.

## ನಿಯಮ 9: ಸ್ಪರ್ಧೆಯ ಬಹುಮಾನಗಳು

1. ಸ್ಪರ್ಧೆಯಲ್ಲಿ ವಿಜೇತರು, ಎರಡನೇ ಸ್ಥಾನ, ಅತ್ಯುತ್ತಮ ವಾದ ಪತ್ರ, ಅತ್ಯುತ್ತಮ ಮಹಿಳಾ ನ್ಯಾಯವಾದಿ ಹಾಗೂ ಅತ್ಯುತ್ತಮ ಪುರುಷ ನ್ಯಾಯವಾದಿ ಎಂಬ ಒಟ್ಟು 5 ಬಹುಮಾನಗಳಿರುತ್ತವೆ.

2. ಫೈನಲ್ ಸುತ್ತಿನ ವಿಜೇತರು ಚಾಂಪಿಯನ್ ಆಗುತ್ತಾರೆ ಮತ್ತು ಫೈನಲ್ ಸುತ್ತಿನ ಎದುರಾಳಿ ತಂಡವನ್ನು ಎರಡನೇ ಸ್ಥಾನ ಎಂದು ಗುರುತಿಸಲಾಗುತ್ತದೆ.

3. ಎಲ್ಲಾ ಮೌಖಿಕ ಸುತ್ತುಗಳಲ್ಲಿ ಅವರ ಸಾಧನೆಯ ಆಧಾರದ ಮೇಲೆ ಅತ್ಯುತ್ತಮ ನ್ಯಾಯವಾದಿಯನ್ನು ನಿರ್ಧರಿಸಲಾಗುತ್ತದೆ. ಅತಿ ಹೆಚ್ಚು ಅಂಕ ಗಳಿಸಿದ ಒಬ್ಬ ಪುರುಷ ನ್ಯಾಯವಾದಿ ಮತ್ತು ಒಬ್ಬ ಮಹಿಳಾ ನ್ಯಾಯವಾದಿಯನ್ನು ಅತ್ಯುತ್ತಮ ಪುರುಷ ನ್ಯಾಯವಾದಿ ಮತ್ತು ಅತ್ಯುತ್ತಮ ಮಹಿಳಾ ನ್ಯಾಯವಾದಿ ಎಂದು ಆಯ್ಕೆ ಮಾಡಲಾಗುತ್ತದೆ.

4. ತಂಡದ ಲಿಖಿತ ವಾದ ಪತ್ರಗಳಿಗೆ ನಿಯಮ 8.2 ರಡಿ ನೀಡಲಾಗುವ ಒಟ್ಟು ಅಂಕಗಳನ್ನು ಆಧರಿಸಿ ಅತ್ಯುತ್ತಮ ವಾದಪತ್ರ ಬಹುಮಾನ ನೀಡಲಾಗುವುದು.

## ನಿಯಮ 10: ನಿಯಮಗಳ ವ್ಯಾಖ್ಯಾನ

1. ಎಲ್ಲಾ ನಿಯಮಗಳು ಕೇವಲ ಸೂಚನಾತ್ಮಕವಾಗಿದ್ದು, ಸ್ಪರ್ಧೆಯ ಸಮಗ್ರ ನಿಯಮಗಳಾಗಿರುವುದಿಲ್ಲ. ಆದ ಕಾರಣ, ನ್ಯಾಯ ಸಮ್ಮತತೆ ಮತ್ತು ಸಮಾನತೆಯ ಹಿತದೃಷ್ಟಿಯಿಂದ ನಿಯಮಗಳನ್ನು ವ್ಯಾಖ್ಯಾನಿಸಲು ಸಂಘಟಕರಿಗೆ ವಿಶೇಷ ಅಧಿಕಾರವಿರುತ್ತದೆ. ಸಂಘಟಕರು ಈ ನಿಯಮಗಳ ಮೇಲೆ ನೀಡಿದ ವ್ಯಾಖ್ಯಾನವು ನಿರ್ಣಾಯಕವಾಗಿರುತ್ತದೆ ಮತ್ತು ಅಂತಿಮವಾಗಿರುತ್ತದೆ.
2. ಈ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು. ಈ ನಿಯಮಗಳ ವ್ಯಾಖ್ಯಾನಕ್ಕೆ ಸಂಬಂಧಿಸಿದ ಸಾಮಾನ್ಯ ಪ್ರಶ್ನೆಗಳನ್ನು ಸಿ.ಸಿ.ಗೆ ಸಲ್ಲಿಸಬೇಕು. ಯಾವುದೇ ನಿಯಮದ ಉಲ್ಲಂಘನೆಯು ಅನರ್ಹತೆಗೆ ಕಾರಣವಾಗುತ್ತದೆ.

## ನಿಯಮ 11: ನೀತಿ ಸಂಹಿತೆ

1. ಅಣಕು ನ್ಯಾಯಾಲಯದ ಸ್ಪರ್ಧೆಯಲ್ಲಿ ಭಾಗವಹಿಸುವವರು ಔಪಚಾರಿಕ ಉಡುಗೆಯಲ್ಲಿ ಮಾತ್ರ ಇರುತ್ತಾರೆ. ಹುಡುಗಿಯರು : ಕಪ್ಪು ಪ್ಯಾಂಟ್, ಬಿಳಿ ಅಂಗಿ, ಕಪ್ಪು ಬ್ಲೇಜರ್ ಅಥವಾ ಸಾಂಪ್ರದಾಯಿಕ ಬಿಳಿ ಉಡುಗೆ ಹಾಗೂ ಕಪ್ಪು ಬ್ಲೇಜರ್‌ಗಳನ್ನು ಧರಿಸತಕ್ಕದ್ದು. ಹುಡುಗರು: ಕಪ್ಪು ಪ್ಯಾಂಟ್, ಬಿಳಿ ಅಂಗಿ, ಕಪ್ಪು ಟೈ ಮತ್ತು ಕಪ್ಪು ಬ್ಲೇಜರ್‌ಗಳನ್ನು ಧರಿಸತಕ್ಕದ್ದು.
2. ಸ್ಪರ್ಧೆಯಲ್ಲಿ ಭಾಗವಹಿಸುವ ತಂಡದ ಸದಸ್ಯರೆಲ್ಲರೂ ಗೌರವಯುತವಾಗಿ ವರ್ತಿಸಬೇಕು ಮತ್ತು ಸಂಘಟಕರಿಗೆ ಯಾವುದೇ ಅನಾನುಕೂಲತೆಯನ್ನು ಉಂಟು ಮಾಡಬಾರದು. ಕಾರ್ಯಕ್ರಮದ ನ್ಯಾಯಾಧೀಶರುಗಳಿಗೆ, ಸಹ ಸ್ಪರ್ಧಿಗಳಿಗೆ, ಅತಿಥೇಯ ಸಂಸ್ಥೆಯ ಸದಸ್ಯರ ಬಗ್ಗೆ ಅಗೌರವ ತೋರಿಸಿದರೆ, ನಿಯಮಬಾಹಿರವಾಗಿ ವರ್ತಿಸಿದರೆ ಅಥವಾ ಯವುದೇ ಉಪದ್ರವಕ್ಕೆ ಕಾರಣರಾದರೆ ಅಂತಹ ಸ್ಪರ್ಧಿಗಳನ್ನು ತಕ್ಷಣವೇ ಸ್ಪರ್ಧೆಯಿಂದ ಅನರ್ಹಗೊಳಿಸಲಾಗುತ್ತದೆ.

## ನಿಯಮ 12: ಹಾಜರಾಗುವಲ್ಲಿ ಹಾಗೂ ವಾದ ಮಂಡನೆಯಲ್ಲಿ ವಿಳಂಬ

ಮೌಖಿಕ ಸುತ್ತುಗಳಲ್ಲಿ ಭಾಗವಹಿಸಲು ನಿಗದಿಪಡಿಸಿದ ಸಮಯದಲ್ಲಿ ಹಾಜರಾಗಿ ನಿಗದಿತ ಸಮಯದ ಪ್ರಾರಂಭದ ನಂತರದ 10 ನಿಮಿಷಗಳ ವರೆಗೂ ತಮ್ಮ ವಾದವನ್ನು ಮಂಡಿಸಲು ವಿಫಲರಾದಲ್ಲಿ ಅಂತಹ ತಂಡವು ಆ ಸುತ್ತಿನಲ್ಲಿ ಭಾಗವಹಿಸಿರುವುದಿಲ್ಲವೆಂದು ಭಾವಿಸಲಾಗುವುದು.

# ನೋಂದಣಿ ಪತ್ರ

## ರಾಜ್ಯ ಮಟ್ಟದ ಎಂಟನೆಯ ಕನ್ನಡ ಕಲ್ಪಿತ ನ್ಯಾಯಾಲಯ ಸ್ಪರ್ಧೆ–2021

**ಹೆಸರು ಮತ್ತು ವಿಳಾಸ/ವಿದ್ಯಾ ಸಂಸ್ಥೆಯ ಹೆಸರು ಹಾಗೂ ಮಿಂಚಂಚೆ ಮತ್ತು ದೂರವಾಣಿ ಸಂಖ್ಯೆ**

1. **ವಾದ ಮಂಡಿಸುವ ವಿದ್ಯಾರ್ಥಿ ಹೆಸರು** :

   **ತರಗತಿ** :

   **ವಿಳಾಸ** :______________________

   ______________________

   **ದೂರವಾಣಿ ಸಂಖ್ಯೆ** ______________________

   **ಮಿಂಚಂಚೆ:**

   ಭಾವಚಿತ್ರ

2. **ವಾದ ಮಂಡಿಸುವ ವಿದ್ಯಾರ್ಥಿ ಹೆಸರು** :

   **ತರಗತಿ** :

   **ವಿಳಾಸ** :______________________

   ______________________

   **ದೂರವಾಣಿ ಸಂಖ್ಯೆ** ______________________

   **ಮಿಂಚಂಚೆ:**

   ಭಾವಚಿತ್ರ

3. **ಸಂಶೋಧನಾ ವಿದ್ಯಾರ್ಥಿ ಹೆಸರು** :

   **ತರಗತಿ** :

   **ವಿಳಾಸ** :______________________

   ______________________

   **ದೂರವಾಣಿ ಸಂಖ್ಯೆ** ______________________

   **ಮಿಂಚಂಚೆ:**

   ಭಾವಚಿತ್ರ

**ಮಹಾವಿದ್ಯಾಲಯದ ಮುಖ್ಯಸ್ಥರ ಸಹಿ ಮತ್ತು ಮೊಹರು**

ಭಾವಚಿತ್ರಗಳನ್ನು ಮಹಾವಿದ್ಯಾಲಯದ ಪ್ರಾಚಾರ್ಯರು ಧೃಢೀಕರಿಸಬೇಕು

| ಪ್ರಮುಖ ದಿನಾಂಕಗಳು | |
|---|---|
| ಅಣಕು ನ್ಯಾಯಾಲಯ ಸ್ಪರ್ಧೆಯ ದಿನಾಂಕ | 10ನೇ ಮತ್ತು 11ನೇ ಜುಲೈ 2021 |
| ತಾತ್ಕಾಲಿಕ ನೋಂದಣಿಗೆ ಅಂತಿಮ ದಿನಾಂಕ | 20ನೇ ಜೂನ್ 2021 |
| ಅಂತಿಮ ನೋಂದಣಿಗೆ ಅಂತಿಮ ದಿನಾಂಕ | 3 ನೇ ಜುಲೈ 2021 |
| ಲಿಖಿತ ವಾದ ಪತ್ರಗಳನ್ನು ಸಲ್ಲಿಸಲು ಅಂತಿಮ ದಿನಾಂಕ | 7ನೇ ಜುಲೈ 2021 |

| ಸಂಘಟನಾ ಸಮಿತಿ ಸದಸ್ಯರು | |
|---|---|
| ಡಾ. ರಂಗಸ್ವಾಮಿ ಡಿ.<br>ಸಹಾಯಕ ಪ್ರಧ್ಯಾಪಕರು, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ಹುಬ್ಬಳ್ಳಿ | ಸಂಯೋಜಕರು |
| ಶ್ರೀ ಗಿರೀಶ ಕೆ.ಸಿ.<br>ಸಹಾಯಕ ಪ್ರಧ್ಯಾಪಕರು, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ಹುಬ್ಬಳ್ಳಿ | ಸಂಯೋಜಕರು |
| ಡಾ. ಭೀಮಾಬಾಯಿ ಮೂಲಗೆ<br>ಸಹಾಯಕ ಪ್ರಧ್ಯಾಪಕರು, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ಹುಬ್ಬಳ್ಳಿ | ಸಂಯೋಜಕರು |
| ಶ್ರೀಮತಿ ಅರ್ಚನಾ ಕೆ.<br>ಸಹಾಯಕ ಪ್ರಧ್ಯಾಪಕರು, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ಹುಬ್ಬಳ್ಳಿ | ಸಂಯೋಜಕರು |
| ಶ್ರೀ ಅಭಿಶೇಖ್ ಯಮನೂರ<br>ಬೋಧನಾ ಸಹಾಯಕರು, ಕರಾಕಾವಿ, ಕಾನೂನು ಶಾಲೆ | ತಾಂತ್ರಿಕ ಸಂಯೋಜಕರು |
| ಶ್ರೀ ಪ್ರತಾಪ ಸಿಂಗ್ ಜಾಧವ<br>ಬೋಧನಾ ಸಹಾಯಕರು, ಕರಾಕಾವಿ, ಕಾನೂನು ಶಾಲೆ | ತಾಂತ್ರಿಕ ಸಂಯೋಜಕರು |

ಹೆಚ್ಚಿನ ಮಾಹಿತಿಗಾಗಿ ಈ ಕೆಳಕಂಡ ದೂರವಾಣಿ ಸಂಖ್ಯೆಯನ್ನು ಸಂಪರ್ಕಿಸಲು ಸೂಚಿಸಲಾಗಿದೆ.

ಡಾ. ರಂಗಸ್ವಾಮಿ ಡಿ. – 9964286178

ಶ್ರೀ ಅಭಿಶೇಖ್ ಯಮನೂರ – 7849026292

ಶ್ರೀ ಪ್ರತಾಪ ಸಿಂಗ್ ಜಾಧವ – 9945933835


ನಿರ್ದೇಶಕರು

ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಕಾನೂನು ಶಾಲೆ

ನವನಗರ, ಹುಬ್ಬಳ್ಳಿ

ಮಿಂಚಂಚೆ : kslulawschool@gmail.com

ಫ್ಯಾಕ್ಸ್ : 0836-22223392, ದೂರವಾಣಿ : 0836-2222392

ಜಾಲತಾಣ : www.kslu.karnataka.gov.in